ಚಾವಡಿಯಲ್ಲಿ ಹರಡಿದ ಊರಿನ ನಡು ಬೆಳಗಿನ ಬೇಸಗೆಯ ಬೆಳಕು, ವಾರದ ನಡುವಣ ದಿನಗಳ ಘಂಟೆಗಳನ್ನು ಮೀರಿದ ನೀರವತೆ, ಹಠಾತ್ತನೆ ಕೈಕೊಡುವ ವಿದ್ಯುತ್ತಿನಿಂದಾಗಿ ಗರಗರ ಸದ್ದಿನೊಂದಿಗೆ ನಿಲ್ಲುವ ಫ್ಯಾನಿನ ರೆಕ್ಕೆಗಳು, ತನ್ನ ತಂದೆ ತಾಯಿಯರು ಇದನ್ನೆಲ್ಲ ಹೇಗೆ ಸಹಿಸುತ್ತಾರೆಂದು ಪವನ ಅಚ್ಚರಿಗೊಳ್ಳತೊಡಗಿದಳು.

'ಬಾ ತಲೆಗೆ ತೆಂಗಿನೆಣ್ಣೆ ಹಾಕಿ ತಿಕ್ಕ್‌ತೇನೆ.' ಎಂದು ಅಮ್ಮ ಎಣ್ಣೆಯ ಬಾಟ್ಲಿಯನ್ನು ಹಿಡಿದು ಬಂದಾಗ ಕೂದಲು ಹರಡಿ ಅಮ್ಮನೆದುರು ಕುಳಿತಳು. ಅವಳಿಗೆ ಖುಷಿಯಾಯಿತು. ದೂರ ಇರುವಾಗ ಇಂಥದ್ದೆಲ್ಲ ನೆನಪಾಗಿ ಮನೆಯ ಹಳಹಳಿಕೆ ಆಗುವುದಿತ್ತು. 'ಅಮ್ಮನೊಡನೆ ಬರೀ ಜಗಳ ಮಾಡಿ ಬಂದೆನೇ? ಪಾಪ, ಸರಿಯಾಗಿ ಕೂತು ಮಾತಾಡಲಿಕ್ಕೂ ಆಗಲಿಲ್ಲವಲ್ಲ,' ಎಂದು ಪರಿತಪಿಸದೆ ಇರುತ್ತಿರಲಿಲ್ಲ. ಅಮ್ಮ ತಲೆಗೆ ಎಣ್ಣೆ ಹಾಕಿ ತಿಕ್ಕಿದ್ದು, ಬೇಡ ಬೇಡವೆಂದರೂ ಶ್ಯಾವಿಗೆ ಒತ್ತಿ ಬಾಳೆಹಣ್ಣಿನ ರಸಾಯನದೊಂದಿಗೆ ಬಡಿಸಿದ್ದು, ಜಗಳ ಮಾಡುತ್ತಿದ್ದಂತೆ ಒಂದೊಂದಾಗಿ ತನ್ನ ಬಟ್ಟೆಗಳಿಗೆ ಇಸ್ತ್ರಿ ಹಾಕಿ ಮಡಚಿಟ್ಟದ್ದು... ಎಲ್ಲ ನೆನಪಾಗಿ ಪ್ರೀತಿ ಉಕ್ಕಿ ಬರುವುದು ಮುಂಬಯಿಗೆ ಹೋದ ಮೇಲೆಯೇ. ಇಲ್ಲಿಗೆ ಬಂದಾಗ ಮಾತಿಗೆ ಮಾತು ಬೆಳೆದು – ಹೆಚ್ಚಾಗಿ ಮದುವೆಯ ವಿಷಯದಲ್ಲೇ – ಮನಸ್ತಾಪವಾಗುತ್ತಿದ್ದುದೇ ಜಾಸ್ತಿ.

ಅವಳ ತಂದೆಯಾದರೋ ಇದು ಯಾವುದರಲ್ಲೂ ಇರಲಿಲ್ಲ. ಹೋಟೆಲಿಗೆ ಕರೆದುಕೊಂಡು ಹೋದಾರು, ಚೆಸ್ ಆಡಿಯಾರು, ಇಸ್ಪೀಟ್ ಎಲೆ ತೆಗೆದರಂತೂ ಗಂಟೆಗಟ್ಟಲೆ ಸಂಭ್ರಮಿಸಿಯಾರು. ಮದುವೆಯ ಬಗ್ಗೆ ಅವಳನ್ನು ಪೀಡಿಸುವುದಂತೂ ದೂರ ಉಳಿಯಿತು, ಬಂದ ನೆಂಟಸ್ತಿಕೆಗಳ ಬಗ್ಗೆ ಊನ ಕಟ್ಟಲಿಕ್ಕೆ ಬೇಕಾದರೆ ತಯಾರು. ಅವನ ಮೂತಿ ಓರೆ, ಇವನ ಎತ್ತರ ಕಮ್ಮಿ, ಮತ್ತೊಬ್ಬನ ತಂದೆಯ ಇಂಗ್ಲಿಷ್ ಉಚ್ಚಾರ ಸರಿಯಿಲ್ಲ, ಎಂದು ಕೂತಲ್ಲಿಂದಲೇ ತೀರ್ಮಾನ ಹೊರಡಿಸಿಯಾರು. ಮದುವೆಯ ಬಗ್ಗೆ ಪಿರಿಪಿರಿ ಮಾಡುತ್ತಿದ್ದ ಅಮ್ಮನನ್ನು ಹಳಿಯಲಿಕ್ಕಂತೂ ತುದಿಕಾಲಿನಲ್ಲಿ ಸಿದ್ಧ. ಆದರೆ ತಂದೆಯ ಈ ಬೇಜವಾಬ್ದಾರಿತನದ ಬಗೆಗೂ ಒಮ್ಮೊಮ್ಮೆ ಅಸಮಾಧಾನವೆನಿಸುತ್ತಿದ್ದುದಿತ್ತು.

ಬ್ಯಾಂಕಿನ ಕೆಲಸದಿಂದ ಸಮಯಕ್ಕಿಂತ ಮೊದಲೇ ಸ್ವಯಂನಿವೃತ್ತಿ ತೆಗೆದುಕೊಂಡ ಆತ ಸುಮ್ಮನೆ ಸಮಯ ಹಾಳುಮಾಡುತ್ತಿದ್ದಾರೆಂದು ಅಮ್ಮನ ದೂರು ಕೇಳಿ ಕೇಳಿ ಅವಳಿಗೆ ಸಾಕಾಗುತ್ತಿತ್ತು. ಕ್ರಿಕೆಟ್ ಆಟಗಾರನೆಂಬ ರಿಯಾಯತಿಯೊಂದಿಗೆ, ಊರಿನ ಪ್ರತಿಷ್ಠಿತ ಮನೆತನದವನೆಂಬ ಗೌರವ–ದಾಕ್ಷಿಣ್ಯಗಳೂ ಸೇರಿ ಬ್ಯಾಂಕಿನಲ್ಲಿದ್ದಾಗಲೂ ಆತ ಕೆಲಸ ಮಾಡಿದ್ದು ಕಡಿಮೆಯೇ. ಈಗಲಾದರೂ ಅಷ್ಟೆ. ಬೆಳಗ್ಗೆ ವಾಕಿಂಗ್‌ಗೆಂದು ಹೋದರೆ ಅಲ್ಲಿ ಒಂದಷ್ಟು ಜನರೊಂದಿಗೆ ಪಂಚಾತಿಕೆ ಮಾಡಿಕೊಂಡು, ಕಾಫಿ ಕುಡಿದು, ಕೆಲವೊಮ್ಮೆ ತಿಂಡಿಯೂ ತಿಂದುಕೊಂಡು ಮನೆಗೆ ಬರುವಾಗ ಸೂರ್ಯ ಮೇಲೇರಿ ಆಗುತ್ತಿತ್ತು.

'ಅಲ್ಲಿ ಮುದುಕರೊಟ್ಟಿಗೆ ಇವರ ಪಂಚಾತಿಕೆ... ಇಲ್ಲಿ ನಾನು ತಿಂಡಿ ಮಾಡಿ ಕಾದರೆ, ಹೊಟ್ಟೆತುಂಬ ಹೋಟೆಲಿನಲ್ಲಿ ತಿಂದಾಯ್ತು ಅಂತ ಹೇಳುದು.' ಅಮ್ಮ ಹೇಳುವಾಗ ತಮಾಷೆ ಎನಿಸುತ್ತಿತ್ತು.

'ಮುದುಕರಾದ್ರೆ ಏನಾಯ್ತು? ನಾನೂ ಮುದುಕನೇ.' ಅಪ್ಪನ ಗುರುಗುಟ್ಟುವಿಕೆ.

'ಊರಿಗ್ಮುಂಚೆ ಮುದುಕರಾಗಲಿಕ್ಕೆ ಆಸೆ ನೋಡು! ಇಲ್ಲಿ ನಾನು ಕಾಯುತ್ತ ಕುಳಿತದ್ದು ಏನೂ ಅಲ್ಲ...'

'ಆಯ್ತು ಹಾಗಾದ್ರೆ, ತಿಂಡಿ ಮಾಡುದೂ ಬೇಡ, ಕಾಯುದೂ ಬೇಡ. ನಾನು ದಿನಾ ಅಲ್ಲೇ ತಿಂದು ಬರ್ತೇನೆ, ಸೈಯಾ?'

ಮಾತೆತ್ತಿದರೆ ಹೀಗೆ ಜಗಳ, ವಾಗ್ವಾದ. ಒಮ್ಮೆ ಅಮ್ಮ ಮದುವೆಯ ಬಗ್ಗೆ ಹೇಳುವಾಗ ಅವಳು ಕೇಳಿಯೇ ಬಿಟ್ಟಿದ್ದಳು, 'ಯಾಕಮ್ಮ ಅಷ್ಟು ಒತ್ತಾಯ ನಿಂದು? ಯಾಕೆ ಮದುವೆಯಾಗುದು? ಹೀಗೆ